ಸಿಸಿ ನಂಃ 2226/2024

ಸಿ.ಡಬ್ಲೂ- 1

ಪಿ.ಡಬ್ಲೂ -1

# 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

| | | |
|---|---|---|
| ಸಾಕ್ಷಿದಾರರ ಹೆಸರು | : | ಸಯ್ಯದ |
| ತಂದೆಯ ಹೆಸರು | : | ಸೈಯ್ಯದ ಮೈನುದ್ದಿನ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು: **23-12-2025**

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ಆರೋಪಿತರು ನನಗೆ ಗೊತ್ತು. ಮೃತ ವ್ಯಕ್ತಿ ನನ್ನ ತಮ್ಮ. ಸದರಿಯವರು ಒಂದುವರೆ ವರುಷದ ಹಿಂದೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಆ ದಿನ ಆರೋಪಿ ಮತ್ತು ನನ್ನ ತಮ್ಮ ಗೋವನಕೊಪ್ಪ ಕಡೆಯಿಂದ ಕೆಎ.25-ಎಚ್ ಜಿ ಕಪ್ಪು ಬಣ್ಣದ ಡಿಯೋ ಬೈಕದಲ್ಲಿ ಬರುತ್ತಿದ್ದಾಗ ಕಾಲೇಜು ಹತ್ತಿರ ಇರುವ ಸ್ಪೀಡ್ ಬ್ರೇಕ್ ಹತ್ತಿರ ಜಂಪ ಮಾಡಿಸಿದಾಗ ನನ್ನ ತಮ್ಮ ಹಿಂದಿನಿಂದ ಬಿದ್ದಿರುತ್ತಾನೆ. ಅದರಿಂದ ಆತನ ತಲೆಗೆ ಪೆಟ್ಟಾಗಿರುತ್ತದೆ. ಈ ವಿಷಯವನ್ನು ನನ್ನ ಸೇಹಿತ ಪೋನ ಮಾಡಿ ತಿಳಿಸಿರುತ್ತಾನೆ. ನಂತರ ನಾವು ಸಿವಿಲ್ ಆಸ್ಪತ್ರೆಗೆ ಹೊದೆವು. ನಂತರ ಅವರು ಕೆ.ಎಮ್.ಸಿ ಗೆ ಕರೆದುಕೊಡು ಹೋಗಲು ಹೇಳಿದ್ದು, ಅಲ್ಲಿ ನಾವು 3 ದಿನಗಳ ಕಾಲ

ಇದ್ದೆವು. ನಂತರ ಆತನ ತೀರಿಕೊಂಡಿರುತ್ತಾನೆ. ಈ ಬಗ್ಗೆ ನಾನು ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.2 (ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಪಿ.3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.3 (ಎ) ಎಂದು ಗುರುತಿಸಲಾಯಿತು. ಭಾವಚಿತ್ರವನ್ನು ನಿಪಿ.4 ಎಂದು ಗುರುತಿಸಲಾಯಿತು. ಅಪಘಾತವು ಯಾರ ತಪ್ಪಿನಿಂದ ಆಗಿಲ್ಲ ಆದರೆ ಆರೋಪಿ ಬೈಕ್ ಓಡಿಸಿರುತ್ತಾರೆ ಆ ದಿನ ಆರೋಪಿ ಸ್ಪೀಡ್ ಬ್ರೇಕ್ ಹಾರಿಸಿದ್ದರಿಂದ ಅಪಘಾತವಾಗಿರುತ್ತದೆ. ಸಾಕ್ಷಿ ವಾಹನ ಜಪ್ತು ಪಂಚನಾಮೆಯಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ. 5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.5 (ಎ) ಎಂದು ಗುರುತಿಸಲಾಯಿತು. ಭಾವಚಿತ್ರವನ್ನು ನಿಪಿ.6 ಎಂದು ಗುರುತಿಸಾಯಿತು.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಅಪಘಾತವು ದಿನಾಂಕಃ 26-05-2024 ರಂದು ರಾತ್ರಿ 7.00 ಗಂಟೆ ಆಗಿರುತ್ತದೆ ಎಂದರೆ ಸರಿ. ಅಪಘಾತ ಪಡಿಸಿದ ವಾಹನ ನಂ. ಕೆಎ 25-ಎಚ್ ಜಿ-2997 ಎಂದರೆ ಸರಿ. ಆ

ಸಿಸಿ ನಂಃ 2226/2024

ಸಿ.ಡಬ್ಲೂ– 1

ಪಿ.ಡಬ್ಲೂ –1

ದಿನ ಆರೋಪಿ ವಾಹನವನ್ನು ಜೋರಾಗಿ ಓಡಿಸಿಕೊಂಡು ಸ್ಪೀಡ್ ಬ್ರೇಕ್ ಜಂಪ ಮಾಡಿಸಿದ್ದರಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತವು ಆರೋಪಿಯ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಬೇರೆಯವರು ಹೇಳಿದ್ದರಿಂದ ಅಪಘಾತದ ಬಗ್ಗೆ ಗೊತ್ತಾಗಿದೆ ಎಂದರೆ ಸರಿ. ನಿಪಿ.1 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಅಪಘಾತದಲ್ಲಿ ಆರೋಪಿಯ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**

4 ನೇ ಹಿ ದಿ ನ್ಯಾಹಾಗೂ ಜೆಎಂಎಫ್‌ಸಿ,

ಧಾರವಾಡ.

ಸಿಸಿ ನಂಃ 2226/2024

ಸಿ.ಡಬ್ಲೂ– 1

ಪಿ.ಡಬ್ಲೂ –1